ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ನ್ಯಾಯಾಲಯ,
ಹೊನ್ನಾಳಿ

ಸಿ.ಸಿ. ನಂ. 443-2019

ಪಿರ್ಯಾದುದಾರರು: ರಾಜ್ಯ ಹೊನ್ನಾಳಿ ಆರಕ್ಷಕ ಠಾಣೆ, ಹೊನ್ನಾಳಿ

ಆರೋಪಿ : ಶಿವಕುಮಾರ ಮತ್ತು ಇನ್ನೊಬ್ಬರು

ದೋಷಾರೋಪಣೆ

ನಾನು ಶ್ರೀ ಎಂ.ವಿಜಯ್, ಬಿ.ಎ. ಎಲ್.ಎಲ್.ಬಿ., ಹೆ. ಪ್ರ. ದ ನ್ಯಾ. ದಂ., ಹೊನ್ನಾಳಿ.

ಆರೋಪಿತರಾದ ನೀವು

1. ಶ್ರೀ ಶಿವುಕುಮಾರ ಬಿನ್ ಶಾಂತರಾಜ್ ,
ವಯಸ್ಸು 18 ವರ್ಷ, ವ್ಯಾಪಾರಿ,

2. ಶ್ರೀ . ಶಾಂತರಾಜ್ ಬಿನ್ ಬಸಪ್ಪ
ವಯಸ್ಸು 60 ವರ್ಷ, ವ್ಯಾಪಾರಿ ,
ಇವರೆಲ್ಲರ ವಾಸ: ಯಕ್ಕನಹಳ್ಳಿ ಗ್ರಾಮ,
ಹೊನ್ನಾಳಿ ತಾ.

ಎಂಬುವವರ ಮೇಲೆ ಆಪಾದನೆ ಹೊರಿಸುವುದೇನೆಂದರೆ,

ದಿನಾಂಕ: 01-04-2018 ರಂದು ಸಂಜೆ 5-20 ಗಂಟೆ ಸಮಯದಲ್ಲಿ ಆರೋಪಿಗಳಾದ ನೀವುಗಳು ಹೊನ್ನಾಳಿ ತಾಲ್ಲೂಕು ಯಕ್ಕನಹಳ್ಳಿ ಗ್ರಾಮದಲ್ಲಿ ನೀವುಗಳು ನಿಮ್ಮ ವಾಸದ ಮನೆಯ ಮುಂಭಾಗ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಅಂದಾಜು ಬೆಲೆ 8635 ರೂಗಳ 180 ಎಂ.ಎಲ್ ನ 45 ಬ್ಯಾಗ್‌ಪಿಪರ್ ವಿಸ್ಕಿ ಪೌಚ್‌ಗಳು , 90 ಎಂ.ಎಲ್ ನ 145 ಹೈವರ್ಡ್ಸ್ ವಿಸ್ಕಿ ಪೌಚ್ ಗಳನ್ನು ಒಂದು ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಅಕ್ರಮ ಲಾಭಕ್ಕಾಗಿ ಸಂಗ್ರಹ ಮಾಡಿರುತ್ತೀರಿ . ಆ ಮೂಲಕ ನನ್ನ ಸಂಜ್ಞಾನದೊಳಗೆ ಕಲಂ 32 ಅಬಕಾರಿ ಕಾಯ್ದೆಯಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಎರಡನೇಯದಾಗಿ, ಮೇಲಿನ ದಿನ, ಸ್ಥಳ ಹಾಗೂ ವೇಳೆಯಂದು ನೀವುಗಳು ಸರ್ಕಾರದಿಂದ ಯಾವುದೇ ಪರವಾನಿಗೆಯನ್ನು ಹೊಂದದೆ ಅಕ್ರಮವಾಗಿ ಮದ್ಯ ತುಂಬಿದ ಪೌಚ್‌ಗಳನ್ನು ಮಾರಾಟ ಮಾಡಿತ್ತಿರುತ್ತೀರಿ. ಆ ಮೂಲಕ ನನ್ನ ಸಂಜ್ಞಾನದೊಳಗೆ ಕಲಂ 34 ಅಬಕಾರಿ ಕಾಯ್ದೆಯಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಈ ಮೇಲೆ ತಿಳಿಸಿದ ಆರೋಪಗಳ ವಿಚಾರಣೆಯು ಇದೇ ಕೋರ್ಟಿನ ಅಧಿಕಾರ ವ್ಯಾಪ್ತಿಯಲ್ಲಿರುವುದರಿಂದ ವಿಚಾರಣೆಯಾಗಲು ಆದೇಶಿಸಿದ್ದೇನೆ.

ತಾಃ 23/7-2019

ಪ್ರ. ದ. ನ್ಯಾ. ದಂ., ಹೊನ್ನಾಳಿ.

ಪ್ರಶ್ನೆ-1ಃ ಮೇಲೆ ಓದಿ ಹೇಳಿದ ನಿಮ್ಮಗಳ ಮೇಲೆ ಮಾಡಿರುವ ಆರೋಪಗಳು ತಿಳಿಯಿತೇ?

ಉತ್ತರಃ ತಿಳಿಯಿತು

ಪ್ರಶ್ನೆ-2ಃ ಸದರಿ ಆರೋಪಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ ತಪ್ಪು ಒಪ್ಪಿಕೊಳ್ಳುವುದಿಲ್ಲ, ವಿಚಾರಣೆಯಾಗಬೇಕು

ಆರೋಪಿ ನಂ.1) Shivakumar C.S.

ಆರೋಪಿ ನಂ.2) Shanthamma C B

23/7

ತಾಃ 23/7-2019

ಪ್ರ. ದ. ನ್ಯಾ. ದಂ., ಹೊನ್ನಾಳಿ.